**O.S.No.7435/2019**

**PW-1**

<u>ದಿನಾಂಕಃ **10.09.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ **1** ರಿಂದ **3** ಪ್ರತಿವಾದಿ ಪರ ಶ್ರೀ ಡಿ ಸಿ ಆರ್ ವಕೀಲರಿಂದಃ</u>

ನನಗೆ ಕನ್ನಡ ಮತ್ತು ಇಂಗ್ಲೀಷ ಭಾಷೆಗಳು ಓದಲು ಬರೆಯಲು ಬರುತ್ತದೆ. ನಾನು ಗೃಹಿಣಿ. ನೀವು ಗೃಹಿಣಿ ಆದ್ದರಿಂದ ನಿಮಗೆ ವರಮಾನ ಇರುವುದಿಲ್ಲ ಎಂದರೆ ನನ್ನ ಸ್ವಂತ ವರವೂನ ಇಲ್ಲ ನನ್ನ ತಂದೆಯವರುನನ್ನ ಹೆಸರಿಗೆ ಮನೆ ಮಾಡಿಕೊಟ್ಟಿದ್ದಾರೆ ಅದರ ಬಾಡಿಗೆ ಬರುತ್ತದೆ. ಮನೆ ನಂ 78, 1 ನೇ ಮುಖ್ಯ ರಸ್ತೆ, 2 ನೇ ಅಡ್ಡ ರಸ್ತೆ, ಜಗಜೀವನ ರಾಮನಗರ, ಬೆಂಗಳೂರು-18. ನನಗೆ ಪ್ರಸ್ತುತ ಈಗ ಮಾಸಿಕ ಬಾಡಿಗೆ ರೂ.10,000/- ಬರುತ್ತದೆ. ಮನೆಯನ್ನು ನನಗೆ ನನ್ನ ತಂದೆ ದಾನವಾಗಿ ಬರೆದು ಕೊಟ್ಟಿದ್ದಾರೆ ಅದನ್ನು ನಮ್ಮ ತಂದೆ 1996 ರಲ್ಲಿ ತೀರಿಕೊಂಡ ನಂತರ ನಾವೆಲ್ಲಾ ಮಕ್ಕಳು ಸೇರಿ ಭಾಗ ಮಾಡಿಕೊಂಡೆವು. ಹಾಗಾದರೆ ನಿಮ್ಮ ತಂದೆಯವರಿಂದ ನಿಮಗೆ ದಾನ ಪತ್ರವಾಗಿಲ್ಲ ಎಂದರೆ ಇಲ್ಲ ನನ್ನ ಭಾಗದಲ್ಲಿ ನನಗೆ ಬಂದಿತ್ತು. ಸದರಿ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಿ ಎಂದರೆ ನ್ಯಾಯಾ ಲಯಕ್ಕೆ ಅವಶ್ಯಕತೆ ಇದ್ದರೆ ನಾನು ತಂದು ಹಾಜರುಪಡಿಸುತ್ತೇನೆ ಸದರಿ ವಿಭಾಗ ಪತ್ರ ನೊಂದಣಿ ಆಗಿದೆ. ವಿಭಾಗ ಪತ್ರವನ್ನು ಇಲ್ಲಿಯವರೆಗೂ

ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಅವಶ್ಯಕತೆ ಇಲ್ಲದ ಕಾರಣ ಹಾಜರು ಪಡಿಸಿಲ್ಲ. ವಿಭಾಗ ಪತ್ರ ಯಾವ ದಿನಾಂಕದಂದು ನೊಂದಣಿ ಆಗಿತ್ತು ಎಂದರೆ ನನಗೆ ನೆನಪಿಲ್ಲ. ಆ ಮನೆಯ ಬಾಡಿಗೆಯನ್ನು ಬಿಟ್ಟು ಬೇರೆ ಯಾವುದಾದರೂ ವರಮಾನ ನಿಮಗೆ ಇದೇಯೇ ಎಂದರೆ ಇಲ್ಲ. ದಾವೆಯನ್ನು ನಾವು ಚೀಟಿ ಕಟ್ಟಿದ್ದ ಹಣ ವಾಪಸ್ಸು ನೀಡದಿದ್ದ ಕಾರಣ ಪ್ರತಿವದಿ ವಿರುದ್ದ ಹೂಡಿರುತ್ತೇವೆ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಪ್ಯಾರಾ 3 ರಲ್ಲಿ ಪ್ರತಿವಾದಿಗೆ ಹಣ ನೀಡಿದ್ದೇನೆ ಎಂದು ಹೇಳಿದ್ದೀರಿ ಆ ಸಂಬಂಧ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಿ ಎಂದರೆ MOU ಹಾಜರು ಪಡಿಸಿದ್ದೇನೆ, ನಾನು ಮತ್ತು 1 ನೇ ಪ್ರತಿವಾದಿ ಹತ್ತಿರ ಸಂಬಂಧಿಕರ ಆದ ಕಾರಣ ಅವರ ಬಳಿ ಚೀಟಿ ಹಾಕಿದ್ದೇವು ನಂಬಿಕೆಯಿಂದ ಚೀಟಿ ನಡೆಯುತ್ತಿತ್ತು ಆದ್ದರಿಂದ ಯಾವುದೇ ದಾಖಲೆಗಳು ನಮ್ಮ ಬಳಿ ಇರಲಿಲ್ಲ. ಸದರಿ ಹಣವನ್ನು ನೀವು ನೀಡದಿದ್ದ ಕಾರಣ ನಿಮ್ಮ ಬಳಿ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರ ಜೊತೆ ಚೀಟಿ ವ್ಯವಹಾರ ಮಾಡುತ್ತಿರುವ ಸಂಬಂಧ ನಾವು ಸಂಬಂಧಿಕಾರದ ಕಾರಣ ನಾವು ದಾಖಲೆಗಳನ್ನು ಹಾಜರು ಪಡಿಸಿಲ್ಲ. ಪ್ರತಿವಾದಿಗಳು ಮತ್ತು ನೀವು ಸಂಬಂಧಿಕರಲ್ಲ ಮತ್ತು ನೀವು ಅವರೊಂದಿಗೆ ಚೀಟಿ ವ್ಯವಹಾರ ಮಾಡಿಲ್ಲ ಹಾಗೂ ಅವರು

ಚೀಟಿ ನಡೆಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನೀವು ನಿಮ್ಮ ಪ್ರಮಾಣ ಪತ್ರದ 4ನೆ ಪ್ಯಾರಾದಲ್ಲಿ ಹೇಳಿರುವಂತೆ ಒಟ್ಟು ರೂ.7,50,000/- ಹಣ ಪ್ರತಿವಾದಿಗೆ ನೀಡಿರುವ ಬಗ್ಗೆ ದಾಖಲೆ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಇಲ್ಲ ಸಾಕ್ಷಿ ಮುಂದುವರೆದು ಕುಮರೇಶನ್ ರವರು ಈಗಲೂ ನಮ್ಮ ಅಂಗಡಿಯಲ್ಲಿ ಬಾಡಿಗೆಗೆ ಇದ್ದಾರೆ ಅವರೇ ಹಣವನ್ನು ತೆಗೆದುಕೊಂಡು ಪ್ರತಿ ತಿಂಗಳು ಹೋಗಿ ಪ್ರತಿವಾದಿಗೆ ಹಣ ಕೊಟ್ಟಿದ್ದರು. ಕುಮರೇಶನ್ ಗೆ ನೀವು ಹಣ ನೀಡಿದ್ದ ಬಗ್ಗೆ ಯಾವುದಾದರೂ ಕಾನೂನು ಕ್ರಮ ಹಣಕ್ಕಾಗಿ ಜರುಗಿಸಿದ್ದೀರಾ ಎಂದರೆ ಇಲ್ಲ. ಕುಮರೇಶನ್ ಗೆ ಹಣ ನೀಡಿದ್ದೀನು ಹೊರತುಪಡಿಸಿ ನೀವು ಪ್ರತಿವಾದಿಗಳಿಗೆ ಅವರ ಕುಟುಂಬಸ್ಥರಿಗಾಗಲಿ ಯಾವುದೇ ಹಣ ನೀಡಿಲ್ಲ ಎಂದರೆ ನಾನೇ ಖುದ್ದಾಗಿ ಅವರಿಗೆ ಹಣ ನೀಡಿದ್ದೆ. ಸಾಮಾನ್ಯವಾಗಿ 20 ರಿಂದ 30 ಸಾವಿರ ಮೇಲ್ಪಟ್ಟು ಯಾರಿಗಾದರೂ ಹಣ ನೀಡಿದರೆ ಆ ಸಂಬಂಧ ಅವರಿಂದ ದಾಖಲೆ ಪಡೆದುಕೊಳ್ಳುತ್ತಾರೆ ಎಂದರೆ ಸರಿ. ನೀವು ವಾದ ಪತ್ರ ಮತ್ತು ಮುಖ್ಯ ವಿಚಾರಣದಲಿ ತಿಳಿಸಿದಂತೆ ಒಟ್ಟು ರೂ. 4,00,000/- ಮತ್ತು ರೂ.7,50,000/- ಪ್ರತಿವಾದಿಗೆ ನೀಡಿರುವ ಬಗ್ಗೆ ಆ ದಿನ ಅವರಿಂದ ದಾಖಲೆಗಳನ್ನು ಪಡೆದುಕೊಂಡಿದ್ದೀರಾ ಎಂದರೆ ನಾನು ಸಂಬಂಧಿಕಾರದ ಕಾರಣ ನಂಬಿಕೆಯಿಂದ ಹಣವನ್ನು ನೀಡಿದ್ದೆ. ನಂಬಿಕೆ ವಿಚಾರವನ್ನು ಬಿಟ್ಟರೆ

ಅವರಿಂದ ನೀವು ಬೇರೆ ಯಾವ ದಾಖಲೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿ. ನಿಮ್ಮ ಮತ್ತು ಪ್ರತಿವಾದಿಗಳ ನಡುವೆ ನಂಬಿಕೆ ವಿಚಾರ ಬರುವುದಿಲ್ಲ ಮತ್ತು ನಿಮ್ಮ ಮತ್ತು ಅವರ ನಡುವೆ ಯಾವ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ನಿಪಿ-1 ಈ ಸ್ಟ್ಯಾಂಪ ಪೇಪರನ್ನು ನೀವು ದಿಃ30.08.2017 ರಂದು ಖರೀದಿ ಮಾಡಿದ್ದೀರಿ ಎಂದರೆ ಸರಿ. ಸದರಿ ಪತ್ರವನ್ನು ನೀವು ರೂ.500/- ಖರೀದಿ ಮಾಡಿದ್ದೀರಿ ಎಂದರೆ ಹೌದು. ಆ ಪತ್ರದ ಉದ್ದೇಶ ಲೋನ ಅಗ್ರಿಮೆಂಟ ಇದೆ ಎಂದರೆ ಹೌದು. ಸದರಿ ಪತ್ರವನ್ನು ನೀವು ಹಣದ ವ್ಯವಹಾರಕ್ಕೆ ಅಲ್ಲದೆ MOU ಗೆ ಬಳಿಸಿ ಅದನ್ನು ದುರುಪಯೋಗ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ನಿವು 2017 ರಲ್ಲಿ 1 ನೇ ಪ್ರತಿವಾದಿಯವರ ಮನೆಗೆ ರೌಡಿಗಳೊಂದಿಗೆ ನುಗ್ಗಿ ಬಲವಂತದಿಂದ ಅವರಿಂದ ಹೆಬ್ಬಟ್ಟು ಹಾಕಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಸದರಿ ದಾಖಲೆಗೆ 1 ನೇ ಪ್ರತಿವಾದಿಯಾಗಲಿ ಅವರ ಕುಟುಂಬಸ್ಥರಾಗಲಿ ಮನಃಸ್ಪೂರ್ತಿಯಾಗಲಿ ಒಪ್ಪಿ ಕೊಂಡು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-1 MOU ನಲ್ಲಿ ಚೀಟಿ ವಿಚಾರ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು MOU ನ್ನು ನಾನು ಮತ್ತು ಪ್ರತಿವಾದಿಗಳು ಚೀಟಿ ವ್ಯವಹಾರದ ಹಣವನ್ನು ನೀಡುತ್ತೇವೆ ಎಂದು ಹೇಳಿದ್ ನಂತರ ಮಾಡಿಕೊಂಡಿದ್ದೇವು. ಆ ಕಾರಣಕ್ಕಾಗಿ ಮಾಡಿದ MOU ಅಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದೇ

ದಾಖಲೆಯನ್ನು ಬರೆಸಿ ಕೊಳ್ಳುವಾಗ ಇಬ್ಬರು ಪಕ್ಷಕಾರರು ಮತ್ತು ಸಾಕ್ಷಿಗಳು ಆ ದಾಖಲೆಯಲ್ಲಿ ಸಹಿ ಮಾಡುತ್ತಾರೆ ಎಂದರೆ ಸರಿ. ನಿಪಿ-1 ದಾಖಲೆಗೆ ಸಾಕ್ಷಿದಾರರು ಇಲ್ಲ ಎಂದರೆ ಸರಿಯಲ್ಲ. ನಿಪಿ-1 ಚಾಪಾ ಕಾಗದವನ್ನು ಖರಿದಿಸಿದ 5 ತಿಂಗಳ ನಂತರ MOU ಎಂದು ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ನೀವು MOU ಮಾಡಿಕೊಂಡ ದಿಃ21.01.2018 ರಂದು ಮಹೇಶರವರು ಆಸ್ಪತ್ರೆಯಲ್ಲಿ ಅಡಮೀಟ್ ಆಗಿದ್ದರು ಎಂದರೆ ಸರಿಯಲ್ಲ. ನಿಪಿ-1 ಕ್ಕೆ ಪಕ್ಷಕಾರರು ಮತ್ತು ಸಾಕ್ಷಿದಾರರು ಯಾವ ದಿನಾಂಕದಂದು ಸಹಿ ಮಾಡಿದ್ದರು ಎಂದರೆ ದಿಃ21.01.2018 ರಂದು ಮಾಡಿದ್ದರು. ಆ ದಿನಾಂಕದಂದು ಪ್ರತಿವಾದಿಗಳು ನಿಪಿ-1 ಕ್ಕೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

MOU ನ ಕಡೆ ಪ್ಯಾರಾದಲ್ಲಿ ಅದರಲ್ಲಿ ಒಪ್ಪಿ ಕೊಂಡಂತೆ ಹಣ ನೀಡದ ಪಕ್ಷದಲ್ಲಿ ಪ್ರತಿವಾದಿಗಳ ಮನೆಯನ್ನು ವಶಕ್ಕೆ ಪಡೆಯಬಹುದು ಎಂದು ಪ್ರತಿವಾದಿಗಳಿಗೆ ತಿಳಿಸದೆ ಬರೆದು ಕೊಂಡು ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ.

ಸುಮಾರು 2001 ನೆ ಇಸವಿಯಲ್ಲಿ ಭಾಗವಾದ ನಂತರ ನನಗೆ ಮಾಸಿಕ ರೂ.10,000/- ವರಮಾನ ಬರುತ್ತಿತ್ತು. ನನಗೆ ಮನೆ ಬಾಡಿಗೆ 2001 ನೆ ಇಸವಿಯಿಂದ ಬರುತ್ತಿತ್ತು. ನಿಮಗೆ ಬಾಡಿಗೆ ನೀಡುತ್ತಿದ್ದ ಬಾಡಿಗೆದಾರರ ಹೆಸರು ಮತ್ತು ಅವರೊಂದಿಗಿನ ಬಾಡಿಗೆ ಕರಾರು ಪತ್ರ

ಹಾಜರು ಪಡಿಸಬಹುದೇ ಎಂದರೆ ಬಾಡಿಗೆದಾರರ ಹೆಸರು ನನಗೆ ನೆನಪಿಲ್ಲ ಕರಾರು ಪತ್ರ ನಾನು ಮಾಡಿಸಿಕೊಂಡಿಲ್ಲ. ನಿಮ್ಮ ಮುಖ್ಯ ವಿಚಾರಣಾ ಪತ್ರ ಮತ್ತು ವಾದ ಪತ್ರದಲ್ಲಿ ನೀವು ಹೇಳಿರುವಂತೆ ದಿಃ15.04.2014 ರಂದು ರೂ.1 ಲಕ್ಷ, ದಿಃ03.12.2014 ರಂದು ರೂ.3 ಲಕ್ಷ, ದಿಃ20.01.2015 ರಂದು ರೂ.50,000/- ದಿಃ21.05.2015 ರಂದು 3 ಲಕ್ಷ ಮತ್ತು 2008 ರಂದು ರೂ.3 ಲಕ್ಷ ಹಣ ನೀಡಲು ನಿಮ್ಮ ಬಳಿ ವರಮಾನ ಇರಲಿಲ್ಲ ಎಂದರೆ ಸರಿಯಿಲ್ಲ. ಸಾಕ್ಷಿ ಮುಂದುವರೆದು ನಾನು ಪ್ರತಿ ತಿಂಗಳು ನನಗೆ ಬರುತ್ತಿದ್ದ ಬಾಡಿಗೆ ಹಣದಲ್ಲಿ ಚೀಟಿ ಕಟ್ಟುತ್ತಿದ್ದು , ಆ ಚೀಟಿಗಳನ್ನು ನಾನು ಎತ್ತಿಕೊಂಡಿರಲಿಲ್ಲ ಪ್ರತಿವಾದಿಗಳು ಅವರ ವ್ಯವಹಾರಕ್ಕೆ ನನ್ನ ಚೀಟಿ ಹಣವನ್ನು ಬಳಸಿಕೊಂಡು ನಂತರ ಕೋಡುತ್ತೇನೆ ಎಂದು ಹೇಳಿದ್ದರು. ನಿಮಗೆ ಆ ರೀತಿ ಮನೆ ಇರಲಿಲ್ಲ ಮತ್ತು ಬಾಡಿಗೆ ಬರುತ್ತಿರಿಲಿಲ್ಲ ನೀವು ಚೀಟಿ ಹಣವನ್ನು ಕಟ್ಟಿಲ್ಲ ನ್ಯಾಯಾಲಯದ ಮುಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ನೀವು ಪ್ರತಿವಾದಿಗಳ ಮನೆಗೆ ನುಗ್ಗಿ ಬಲವಂತದಿಂದ ಅವರಿಂದ MOU ಗೆ ಹೆಬ್ಬಟ್ಟಿನ ಗುರುತು ಪಡೆದುಕೊಂಡಿದ್ದಕ್ಕೆ ಪೋಲಿಸ ಆಯುಕ್ತರಿಗೆ ದೂರು ನೀಡಿ ಅಲ್ಲಿಂದ ಜೆ ಜೆ ನಗರ ಪೋಲಿಸಿ ಠಾಣೆಗೆ ದೂರನ್ನು ವರ್ಗಾಯಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಪೋಲಿಸ ಆಯುಕ್ತರಿಗೆ

O.S.No.7435/2019

PW-1

ದಿಃ22.03.2019 ರಂದು ಪ್ರತಿವಾದಿಯವರು ದೂರು ನೀಡಿದ್ದರು ಎಂದು ಒಪ್ಪಿರುತ್ತಾರೆ. ಸದರಿ ದೂರಿನಲ್ಲಿ ನೀವು ಅವರ ಮನೆಗೆ ರೌಡಿಗಳ ಜೊತೆ ನುಗ್ಗಿ MOU ಗೆ ಹೆಬ್ಬೆಟ್ಟಿನ ಗುರುತು ಮಾಡಿಸಿಕೊಂಡಿದ್ದೀರಿ ಎಂದು ಇದೆ ಎಂದರೆ ನನಗೆ ಗೊತ್ತಿಲ್ಲ. ಆ ದೂರಿನ ಮೇರೆ ಪೋಲಿಸರು ನಿಮ್ಮನ್ನು ದಿಃ26.04.2019 ರಂದು ವಿಚಾರಣೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಪೋಲಿಸ ಠಾಣೆಯಿಂದ ಯಾವ ಫೋನು ಕೂಡ ಬಂದಿಲ್ಲ.

ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಿಶಾ ರಾಣಿ ಎ. ಸಿ)
III ನೇ ಎ.ಸಿ.ಸಿ & ಎಸ್.ಜೆ,
ಬೆಂಗಳೂರು.